ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಇಂಡಿ.

ಸಿ.ಸಿ. ಸಂಖ್ಯೆ : **1025/2017**

## ದೋಷಾರೋಪನೆ

ನಾನು ಶ್ರೀ ಅಲ್ತಾಫ್ ಹುಸೇನಸಾಬ ಖನಗಾಂವಿ, ಬಿ.ಕಾಂ., ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ಇಂಡಿ ಈ ಮೂಲಕ ನಿಮ್ಮ ಮೇಲೆ ರಚಿಸುವ ದೋಷಾರೋಪಣೆ ಏನೇಂದರೆ ಈ ಕೆಳಗೆ ನಮೂದಿಸಿದ ಆರೋಪಿತರಾದ ನೀವು

ಆರೋಪಿತ 1) ಶರಣು @ ಶಿವಶರಣ ತಂದೆ ಹನಮಂತ ಜಿತ್ತಿ,
ವಯಾಃ 42 ವರ್ಷ, ಸಾಃ ಲೋಣಿ ಬಿ.ಕೆ, ತಾಃ ಚಡಚಣ,
ಜಿಲ್ಲಾಃ ವಿಜಯಪೂರ.

ದಿನಾಂಕಃ 19–02–2017 ರಂದು ಮುಂಜಾನೆ 08–30 ಗಂಟೆ ಸುಮಾರಿಗೆ ಲೋಣಿ ಬಿ.ಕೆ ಗ್ರಾಮದ ಗೋಡಾವನ್ ಹತ್ತಿರ ಪಿರ್ಯಾದಿದಾರರು ನ್ಯಾಯಾ ಪಂಚಾಯಿತಿ ಮಾಡುವಂತೆ ಕೇಳಿಕೊಂಡಾಗ ನೀವು ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈ ಹಿಡಿದು ಜಗ್ಯಾಡಿ ಸ್ತ್ರೀ ಮಾನಕ್ಕೆ ಚ್ಯುತಿ ಬರುವಂತೆ ನಡೆದುಕೊಂಡು ಭಾರತೀಯ ಧಂಡ ಸಂಹಿತೆ ಕಲಂ 354 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮುಂದುವರೆದು ಅದೇ ದಿನ, ಅದೇ ಸ್ಥಳ, ಅದೇ ಸಮಯಕ್ಕೆ ಆರೋಪಿತರಾದ ನೀವು ಪಿರ್ಯಾದಿಗೆ ಅವಮಾನ ಮಾಡಿದಲ್ಲದೆ ಕಲ್ಲಿನಿಂದ ಬೆನ್ನಿಗೆ ಹೊಡೆದು ಸಾದಾ ಗಾಯಪಡಿಸಿ ಭಾರತೀಯ ಧಂಡ ಸಂಹಿತೆ ಕಲಂ 324 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮುಂದುವರೆದು ಅದೇ ದಿನ, ಅದೇ ಸ್ಥಳ, ಅದೇ ಸಮಯಕ್ಕೆ ಆರೋಪಿತರಾದ ನೀವು ಪಿರ್ಯಾದಿಗೆ ಅಮಮಾನ ಮಾಡಿ ಅವ್ಯಾಚ್ಯ ಶಬ್ದಗಳಿಂದ ಬೈದಾಡಿ ಭಾರತೀಯ ಧಂಡ ಸಂಹಿತೆ ಕಲಂ 504 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮುಂದುವರೆದು ಅದೇ ದಿನ, ಅದೇ ಸ್ಥಳ, ಅದೇ ಸಮಯಕ್ಕೆ ಆರೋಪಿತರಾದ ನೀವು ಪಿರ್ಯಾದಿಗೆ ಅಮಮಾನ ಮಾಡಿ ಅವ್ಯಾಚ್ಯ ಶಬ್ದಗಳಿಂದ ಬೈದಿದಲ್ಲದೆ ಜೀವ ಬೆದರಿಕೆಯನ್ನು ಹಾಕಿ ಭಾರತೀಯ ಧಂಡ ಸಂಹಿತೆ ಕಲಂ 506 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಈ ಮೇಲೆ ಓದಿ ಹೇಳಿದ ಅಪರಾದಗಳಿಗೆ ವಿಚಾರಣೆಗೋಳಪಡಬೇಕೆಂದು ನಿರ್ದೇಶಿಸುತ್ತೇನೆ.

ಪ್ರಶ್ನೆ 1. ಮೇಲೆ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ ?
ಉತ್ತರ:

ಪ್ರಶ್ನೆ 2: ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಉತ್ತರ:

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿದೆ. ಆರೋಪಿತರು ಕೊಟ್ಟಿರುವ ಉತ್ತರಗಳನ್ನು ಅದೇ ಭಾಷೆಯಲ್ಲಿ ನಮೂದಿಸಿಕೊಳ್ಳಲಾಗಿದ್ದು ಸರಿ ಇರುತ್ತದೆ)

ಸ್ಥಳ: ಇಂಡಿ

ದಿ: 06-04-2021

ಸಹಿ/-

ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ, ಇಂಡಿ.